

# ಬಿಯರ್ ಬಾಟಲಿ ದೇಗುಲ



ಬಿಸಾಡಿರುವ ಖಾಲಿ ಬಾಟಲಿಗಳನ್ನೇ ಬಳಸಿ, ಥಾಯ್ಲ್ಯಾಂಡಿನಲ್ಲಿ ವಿಶಿಷ್ಟವಾದ ಬೌದ್ಧ ದೇಗುಲ ಕಟ್ಟಲಾಗಿದೆ.

ಈ ದೇಗುಲವನ್ನು 'ವ್ಯಾನ್ ಪಾ ಮಹಾ ಚೆಡಿ ಕ್ಯೂ ವ್ಯಾಟ್ ಲಾನ್ ಕೌಡ್' ಅಥವಾ ದಿ ಟೆಂಪಲ್ ಆಫ್ ಮಿಲಿಯನ್ ಬಾಟಲ್ಸ್' ಎಂದು ಕರೆಯುತ್ತಾರೆ. ಇದು ಕಾಂಬೋಡಿಯ ಗಡಿ ಬಳಿಯಿರುವ ಸಿಸಾಕೆಟ್ ಪ್ರಾಂತ್ಯದ ಹತ್ತಿರವಿದ್ದು, ಬ್ಯಾಂಕಾಕ್ ನಿಂದ 400 ಮೈಲುಗಳಷ್ಟು ದೂರದಲ್ಲಿದೆ.

ಬೌದ್ಧ ಧರ್ಮದಲ್ಲಿ ಮದ್ಯಪಾನ ಪಾಪಕೃತ್ಯ. ಬೌದ್ಧ ಬಿಕ್ಕುಗಳು 1984 ರಿಂದಲೇ ಬಳಸಿ ಬೇಡವಾಗಿದ್ದ ಬಿಯರ್ ಬಾಟಲಿ ಹಾಗೂ ಇತರೇ ದೊಡ್ಡ ಬಾಟಲಿಗಳನ್ನು ಸಂಗ್ರಹಿಸ ತೊಡಗಿದರು. ಖಾಲಿ ಬಾಟಲಿಗಳಿಂದಲೇ ಕಟ್ಟಡವನ್ನು ಕಟ್ಟಲು ತೀರ್ಮಾನಿಸಿದರು. ಸ್ಥಳೀಯ ಅಧಿಕಾರಿಗಳನ್ನು ಉತ್ತೇಜಿಸಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಾಟಲಿಗಳನ್ನು ಸಂಗ್ರಹಿಸಿ ಇವುಗಳಿಂದಲೇ 20 ಕಟ್ಟಡಗಳನ್ನೊಳಗೊಂಡ ಸಂಕೀರ್ಣ ಒಂದನ್ನು ನಿರ್ಮಿಸಿದ್ದಾರೆ. ಕೊಳದ ಮೇಲೆ ಕಟ್ಟಲಾಗಿರುವ ಮುಖ್ಯ ದೇಗುಲ, ಪ್ರಾರ್ಥನಾ ಮಂದಿರಗಳು, ಸಮಾಧಿ, ಬೌದ್ಧ ಭಿಕ್ಕುಗಳು ವಾಸಿಸುವ ಮನೆಗಳು ಮತ್ತು ಯಾತ್ರಿಕರ ಶೌಚಾಲಯಗಳನ್ನೂ ಕೂಡಾ ಬಾಟಲಿಗಳಿಂದ ಕಟ್ಟಿದ್ದಾರೆ.

ಬಣ್ಣ ಮಾಸುವುದಿಲ್ಲ ಮತ್ತು ಒಳ್ಳೆಯ ಬೆಳಕನ್ನು ನೀಡುತ್ತದೆ. ಸ್ವಚ್ಛಗೊಳಿಸು ವುದೂ ಸುಲಭ. ಪರಿಸರ ಸ್ನೇಹಿಗಳಾದ ಬೌದ್ಧ ಭಿಕ್ಕುಗಳು, ಬಾಟಲಿ ಮುಚ್ಚಳಗಳನ್ನು ಸಹ ಬಿಸಾಡದೆ ಅವುಗಳನ್ನೂ ಬಳಸಿ ಬುದ್ಧನ ಚಿತ್ರವನ್ನು ರಚಿಸಿದ್ದಾರೆ.

'ಇನ್ನೂ ಜಾಸ್ತಿ ಬಾಟಲಿಗಳು ದೊರೆತರೆ ಇನ್ನೂ ಹೆಚ್ಚಿನ ಕಟ್ಟಡಗಳನ್ನು ನಿರ್ಮಿಸುತ್ತೇವೆ' ಎಂದು ಬೌದ್ಧ ಭಿಕ್ಕುಗಳಲ್ಲಿ ಒಬ್ಬರಾಗಿರುವ ಅಬ್ಬೊಟ್ ಸ್ಯಾನ್ ಖೂನ್ಯೊ ನುಡಿಯುತ್ತಾರೆ.

ಕಸದಿಂದ ರಸ ಎನ್ನುವಂತೆ ಒಂದೂವರೆ ಖಾಲಿ ಬಾಟಲಿಗಳಿಂದ ಅಪೂರ್ವವಾದ ಬೌದ್ಧದೇಗುಲ ನಿರ್ಮಾಣವಾಗಿದೆ. ಹಾಗೂ ಈಶಾನ್ಯ ಏಷ್ಯಾದಲ್ಲಿನ ಪರಿಸರ ಸ್ನೇಹಿ ಯಾತ್ರಾಸ್ಥಳ ಎಂಬ ಮಾನ್ಯತೆಯನ್ನೂ ಇದು ಪಡೆದುಕೊಂಡಿದೆ.

★ ವಿದ್ಯಾ ವಿ. ಹಾಲಭಾವಿ